# ಹಂಪಿ ಯಾನ!

(6ನೇ ಪುಟದಿಂದ)

ಇಲ್ಲಿಯ ಆನೆಯ ಲಾಯ ಬೆಕ್ಕಸ ಬೆರಗಾಗುವಂಥದು. ಆನೆ ತಲೆ ಮೇಲಿನ ಸೂರಿನಲ್ಲಿಯೂ ಎಂಥಹ ಚಿತ್ತಾರ..! ಜೊತೆಗೆ ಗಾಳಿಯಾಡಲು ವ್ಯವಸ್ಥೆ. ಲಾಯದ ಮುಂದೊಂದು ದೊಡ್ಡ ಬಯಲು, ಇಲ್ಲಿ ಸೈನಿಕರೊಡನೆ ಆನೆಗಳೂ ಪ್ರಭಾತ್ ಫೇರಿ ಮಾಡುತ್ತಿದ್ದವಂತೆ.

ಪಟ್ಟಾಭಿರಾಮ ದೇವಸ್ಥಾನದ ಬಳಿ ಇರುವ ಪ್ರವೇಶದ್ವಾರದ ಪೂರ್ಣ ನೋಟ ಇಲ್ಲಿದೆ ನೋಡಿ. ಪೂರ್ವಾಭಿಮುಖವಾಗಿರುವ ಈ ದ್ವಾರದ ಬಳಿಯಲ್ಲಿಯೇ ಹನುಮನ ಉಬ್ಬುಚಿತ್ರವೂ ಇದೆ. ದ್ವಾರಪಾಲಕನು ವಿರಮಿಸಲೆಂದೂ ಒಂದು ತಾಣವನ್ನು ಕಟ್ಟಲಾಗಿದೆ. ಕಾಯುವವರ ಹಿತರಕ್ಷಣೆ ಕಾಪಿಡುವ ಆ ಆಡಳಿತದ ಅನುಕೂಲಗಳನ್ನು ಕಂಡಾಗ ಸುವರ್ಣಯುಗವೇ ಅದು ಎಂದೆನಿಸದೇ ಇರದು.

ಅಚ್ಯುತ ದೇವಾಲಯ ಅಂದ್ರೆ ಗೊತ್ತಾಗಲಿಕ್ಕಿಲ್ಲ ನಿಮಗೆ! ಕಂಬಗಳನ್ನು ತಟ್ಟಿದರೆ ನಾದ ಹೊಮ್ಮಿಸುವ ತಾಣ ಇರುವುದು ಇದೇ ಅಂಗಳದಲ್ಲಿ. ಶಿಲಾನಾದ ನೆನಪಿಸಿಕೊಂಡಾಗಲೆಲ್ಲ ಅವೇ ಸಪ್ತಕಂಬಗಳು ನೆನಪಾಗುತ್ತವೆಯಲ್ಲವೇ? ಅದಕ್ಕೆ ನೆಲೆಯಾಗಿರುವ ಅಂಗಳವನ್ನೊಮ್ಮೆ ಇಲ್ಲಿ ನೋಡಿ, ಎಲ್ಲವೂ ಒಂದೇ ನೋಟದಲ್ಲಿ ಸೆರೆ ಸಿಕ್ಕಿದೆ.

ಇತಿಹಾಸದ ವೈಭವವನ್ನೂ, ಆ ಜನರ ವೈಭೋಗವನ್ನು ನೆನಪಿಸಿಕೊಂಡೇ ಮುನ್ನಡೆಯುವಾಗ ಜೀವನದ ಸತ್ಯದರ್ಶನವೂ ಆಗುತ್ತದೆ. ಯಾವುದು ಶಾಶ್ವತ, ಯಾವುದು ನಶ್ವರ ಎಂಬುದು ಈ ದೇವಾಲಯಗಳ ನಗರಿಯಲ್ಲಿ ಅರ್ಥವಾಗುತ್ತದೆ. ಇಲ್ಲಿ ಆಳಿದ



ಆನೆ ಲಾಯ



ಲೋಟಸ್ ಮಹಲ್

